ಉದಯವಾಣಿ
ಕನ್ನಡ ದಿನಪತ್ರಿಕೆ

# ಪ್ರತೀಕ್, ರಕ್ಷಿತಾ, ವಿಕ್ಟರ್ ಫಸ್ಟ್

## ವೃತ್ತಿಪರ ಶಿಕ್ಷಣ ಪರೀಕ್ಷೆಯ ಫಲಿತಾಂಶ ಪ್ರಕಟ



ಎಂಜಿನಿಯರಿಂಗ್, ಬಿ-ಫಾರ್ಮ, ಡಿ-ಫಾರ್ಮದಲ್ಲಿ ಪ್ರತೀಕ್ ಪ್ರಥಮ



ಆಯುರ್ವೇದ, ಹೋಮಿಯೋಪತಿ ಯಲ್ಲಿ ರಕ್ಷಿತಾ ರಮೇಶ್ ಫಸ್ಟ್



ಪಶುವೈದ್ಯಕೀಯ ದಲ್ಲಿ ದಾವಣಗೆರೆಯ ವಿಕ್ಟರ್ ಥಾಮಸ್ ಮೊದಲು

**ಬೆಂಗಳೂರು:** ಪ್ರಸಕ್ತ ಸಾಲಿನ ಸಿಇಟಿ ಫಲಿತಾಂಶ ಪ್ರಕಟಗೊಂಡಿದ್ದು ಎಂಜಿನಿಯರಿಂಗ್ ಹಾಗೂ ಬಿ-ಫಾರ್ಮ, ಡಿ-ಫಾರ್ಮದಲ್ಲಿ ಮಂಗಳೂರಿನ ಎಕ್ಸ್‌ಪರ್ಟ್ ಪಿಯು ಕಾಲೇಜಿನ ಪ್ರತೀಕ್ ಎಸ್. ನಾಯಕ್, ಭಾರತೀಯ ವೈದ್ಯಪದ್ಧತಿ, ಹೋಮಿಯೋಪಥಿ ಮತ್ತು ಬಿ.ಎಸ್ಸಿ (ಕೃಷಿ) ಯಲ್ಲಿ ಬೆಂಗಳೂರಿನ ಎಸ್.ಬಿ. ಮಹಾವೀರ್ ಜೈನ್ ಪಿಯು ಕಾಲೇಜಿನ ರಕ್ಷಿತಾ ರಮೇಶ್, ಪಶುವೈದ್ಯಕೀಯ ವಿಜ್ಞಾನದಲ್ಲಿ ದಾವಣಗೆರೆಯ ವೈಷ್ಣವಿ ಚೇತನ ಪಿಯು ಕಾಲೇಜಿನ ವಿ.ವಿಕ್ಟರ್ ಥಾಮಸ್ ಪ್ರಥಮ ರ್‍ಯಾಂಕ್ ಪಡೆದುಕೊಂಡಿದ್ದಾರೆ.

ಎಂಜಿನಿಯರಿಂಗ್‌ನಲ್ಲಿ ಮೂರನೇ ರ್‍ಯಾಂಕ್ ಪಡೆದಿರುವ ಬೆಂಗಳೂರು ಜಯನಗರದ ಆರ್.ವಿ. ಪಿಯು ಕಾಲೇಜಿನ ಎಸ್.ಅನಿರುದ್ಧ್, ದ್ವಿತೀಯ ಪಿಯುಸಿ ಫಲಿತಾಂಶದಲ್ಲೂ ವಿಜ್ಞಾನ ವಿಭಾಗದಲ್ಲಿ 3ನೇ ರ್‍ಯಾಂಕ್ ಪಡೆದಿದ್ದರು. ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಟಾಪ್ ಹತ್ತು ವಿದ್ಯಾರ್ಥಿಗಳಲ್ಲಿ ಅನಿರುದ್ಧ್ ಹೊರತುಪಡಿಸಿ ಬೇರೆ ಯಾರೂ ಕೂಡ ಸಿಇಟಿ ಟಾಪ್‌ಲಿಸ್ಟ್‌ನಲ್ಲಿ ಇಲ್ಲ.

ಸಿಇಟಿ ಮತ್ತು ನೀಟ್ ಪ್ರತ್ಯೇಕವಾಗಿ ನಡೆದಿರುವುದರಿಂದ ಕೆಲವರು ನೀಟ್ ಮಾತ್ರ ಬರೆದಿರುವ ಸಾಧ್ಯತೆ ಇದ್ದು, ಹೀಗಾಗಿ ಪಿಯುಸಿಯಲ್ಲಿ ಟಾಪ್ ಬಂದವರು ಸಿಇಟಿ ಬರೆದಿರುವ ಸಾಧ್ಯತೆ ಇಲ್ಲದಿರಲೂಬಹುದು. ಹೀಗಾಗಿ ಅಗ್ರಸ್ಥಾನಿಗಳು ಹೆಚ್ಚಾಗಿ ಇಲ್ಲಿ ಕಾಣಿಸಿಕೊಂಡಿಲ್ಲ ಎನ್ನಲಾಗಿದೆ.

ವೈದ್ಯಕೀಯ ಹೊರತುಪಡಿಸಿ ಎಂಜಿನಿಯರಿಂಗ್ ಹಾಗೂ ಇತರೆ ವೃತ್ತಿಪರ ಕೋರ್ಸ್‌ಗಳಿಗೆ ಸಿಇಟಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳ ದಾಖಲೆ ಪರಿಶೀಲನೆ ಜೂನ್ ಮೊದಲ ವಾರದಿಂದ ನಡೆಯಲಿದೆ.

ಮೇ 2 ಮತ್ತು 3ರಂದು ನಡೆದ ಸಿಇಟಿ ಪರೀಕ್ಷೆಯಲ್ಲಿ 1,80,508 ವಿದ್ಯಾರ್ಥಿಗಳು ಹಾಜರಾಗಿದ್ದರು. ವಿದ್ಯಾರ್ಥಿಗಳ ಉತ್ತರ ಪತ್ರಿಕೆಯ ಪರಿಷ್ಕೃತ ಸರಿ ಉತ್ತರ ಆಧರಿಸಿ (ವಿಷಯ ತಜ್ಞರು ತಯಾರಿಸಿದಂತೆ) ಅರ್ಹತಾ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಇದರ ಆಧಾರದಲ್ಲಿ ಭಾರತೀಯ ವೈದ್ಯಪದ್ಧತಿ ಹಾಗೂ ಹೋಮಿಯೋಪಥಿ ಕೋರ್ಸ್‌ಗೆ 96,642 ಮತ್ತು ಎಂಜಿನಿಯರಿಂಗ್‌ನಲ್ಲಿ 1,25,860 ರ್‍ಯಾಂಕ್ ನೀಡಲಾಗಿದೆ. ಬಿ.ಎಸ್ಸಿ ಕೃಷಿ ಕೋರ್ಸ್‌ಗೆ 95,767, ಪಶು ವೈದ್ಯಕೀಯ ಕೋರ್ಸ್‌ಗೆ 94,478 ಮತ್ತು ಬಿ-ಫಾರ್ಮ, ಡಿ-ಫಾರ್ಮ ಕೋರ್ಸ್‌ಗೆ 1,26,839 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ ಎಂದು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ಮಂಗಳವಾರ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಎಂಜಿನಿಯರಿಂಗ್ ವಾಸ್ತುಶಿಲ್ಪ ಕೋರ್ಸ್‌ಗಳ ಪ್ರವೇಶಕ್ಕೆ ನಡೆದಿರುವ ಅಖಿಲ ಭಾರತ ಮಟ್ಟದ ಎನ್ಎಟಿಎ ಅಂಕಗಳ ಆಧಾರಗಳ ಮೇಲೆ ಪ್ರವೇಶ ನೀಡಲಾಗುತ್ತದೆ.

▶ 10ನೇ ಪುಟಕ್ಕೆ